ಜೀವನದ ಮೌಲ್ಯಗಳ ಮೂಲ : ಸನಾತನ ಧರ್ಮ

ಸ್ವಾಮಿ ಸುಖಾತ್ಮಾನಂದ

ಸನಾತನ ಧರ್ಮ ನಮಗೆ ತಿಳಿಸಿಕೊಡುವ ಮೌಲ್ಯಗಳು ಸಾರ್ವತ್ರಿಕವಾದ, ಸರ್ವಮಾನ್ಯವಾದ ಆಧ್ಯಾತ್ಮಿಕ ವಿಚಾರಗಳಾಗಿವೆ. ಅವು ಕಾಲ-ದೇಶ, ಜಾತಿ-ಪಂಗಡ ಹಾಗೂ ಸ್ಥಾನ-ಮಾನಗಳ ಭೇದವಿಲ್ಲದೆ, ಮಾನವಕೋಟಿಗೆ ಶ್ರೇಷ್ಠ ಬದುಕನ್ನು ಕಲಿಸಿಕೊಡುವ ಆದರ್ಶ ಗಳಾಗಿವೆ. ಈ ವಿಷಯವನ್ನು ಕುರಿತು ಇಲ್ಲಿ ವಿವೇಚಿಸಿರುವ ಲೇಖಕರು ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳು. ಪೊನ್ನಂಪೇಟೆ, ಮೈಸೂರು, ಸೇಲಂ ಮುಂತಾದ ಕಡೆ ಸೇವೆ ಸಲ್ಲಿಸಿರುವ ಅವರು ಊಟಿ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದು, ಈಗ ನಿವೃತ್ತ ಜೀವನ ನಡೆಸುತ್ತಿದ್ದಾರೆ.

ಸನಾತನ ಧರ್ಮವು ವಿಶ್ವಸಮ್ಮತ ವಿಚಾರವನ್ನು ತತ್ತ್ವಶಾಸ್ತ್ರ ಸಂಬಂಧಿತ ಅಭಿಪ್ರಾಯಗಳ ಆಧಾರಗಳ ಮೇಲೆ, ದೈನಂದಿನ ಅಭ್ಯಾಸಕ್ಕೆ ಸರಿ ಒಪ್ಪುವ ಮಾರ್ಗವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ವನ್ನು ಮಾನವನಿಗೆ ನೀಡುತ್ತದೆ. ಇದು ಗಗನದಷ್ಟು ವಿಶಾಲ ಹಾಗೂ ಸಾಗರದಷ್ಟು ಆಳ. ಇದರ ಪ್ರಮುಖ ವೈಶಿಷ್ಟ್ಯ ಮಾನವ ಹಾಗೂ ಸೃಷ್ಟಿಯಲ್ಲಿ ಅವನ ಸಮಾವೇಶ. ಮಾನವ ಯಾರು? ಎಲ್ಲಿಂದ ಬಂದಿದ್ದಾನೆ? ಯಾವ ಕಾರಣಕ್ಕಾಗಿ ಇಲ್ಲಿದ್ದಾನೆ? – ಇವು ಪ್ರತಿಯೊಬ್ಬನನ್ನೂ ಕೆರಳಿಸುವ ಕೆಲವು ಮೂಲಭೂತ ಪ್ರಶ್ನೆಗಳು. ಇದಕ್ಕೆ ಉತ್ತರ, ಮಾನವ ಒಂದು ಆತ್ಮ, ಚೈತನ್ಯ, ದೈವಾಗ್ನಿಯ ಒಂದು ಕಣ, ಸತ್-ಚಿತ್-ಆನಂದ. ಇದು ಶರೀರ, ಮನಸ್ಸು, ಅಹಂಕಾರಗಳನ್ನು ಒಳಗೊಂಡು, ಜನನ ಮರಣಗಳ ಪುನರಾವರ್ತನೆಯುಳ್ಳ 'ಸಂಸಾರ'ವನ್ನು ಅನುಭವಿಸುವುದು. ಮಾನವ ಜನ್ಮ ಅತ್ಯಂತ ಮಹತ್ವಪೂರ್ಣವಾದುದು .

ವೇದಗಳು ಪ್ರತಿಪಾದಿಸುವ ಈ ಸನಾತನ ಧರ್ಮಗಳೇನು? 'ಧರ್ಮ' ಎಂಬುವ ಶಬ್ದ ಮಾನವನೂ ಸೇರಿದಂತೆ ಎಲ್ಲ ವಸ್ತುಗಳ ನೈಜ ಸ್ವಭಾವವನ್ನು ಸೂಚಿಸುತ್ತದೆ. ಅವು ಸುನಿಶ್ಚಿತವಾದ ಸತ್ಯ ಗಳು. ಮಾನವನಿಗೂ, ಎಲ್ಲ ಜೀವಿಗಳಿಗೂ, ಎಲ್ಲ ಕಾಲದಲ್ಲೂ, ಎಲ್ಲ ಸನ್ನಿವೇಶಗಳಲ್ಲೂ ಉಪಕಾರಿಯಾದುದರಿಂದ ಅವುಗಳು ಸನಾತನ ಎಂದು ಕರೆಯಲ್ಪಡುತ್ತದೆ. ಸತ್ಯಾನ್ವೇಷಣೆಯ ಗುರಿಯನ್ನು ಇದು ನಿರ್ದೇಶಿಸುತ್ತದೆ – ಮತ, ಕುಲ, ಧರ್ಮ, ವರ್ಣ, ಲಿಂಗ, ನಂಬಿಕೆ ಇವುಗಳಿಂದ ಸ್ವತಂತ್ರವಾದ ಸತ್ಯ. ಇದು ಎಲ್ಲ ಜೀವಿಗಳಿಗೂ ಸಮವಾಗಿ ಒಳ್ಳೆಯದನ್ನೇ ಮಾಡುವುದು. ಇದನ್ನು ಒಂದೇ ವಾಕ್ಯರಣಿಯಲ್ಲಿ ಹೇಳುವುದಾದರೆ ಮಾನವನ ಸಾರಭೂತವಾದ ಸದ್ಗುಣ. ತನ್ನ ಯೋಗಕ್ಷೇಮ – **ಅಭ್ಯುದಯ** ಮತ್ತು ಎಲ್ಲ ಜೀವಿಗಳ ಕ್ಷೇಮ – **ನಿಃಶ್ರೇಯಸ** ಎಂಬ ಉದ್ದೇಶವನ್ನು ಪೂರ್ಣಗೊಳಿಸುವುದು.

ವೇದಗಳು ಪ್ರತಿಪಾದಿಸುವ ಸನಾತನ ಧರ್ಮ ನಮ್ಮ ಬಾಳಿನಲ್ಲಿ ಭರವಸೆ ಮೂಡಿಸುವುದು, ಬಾಳಿಗೊಂದು ಅರ್ಥವನ್ನು ಕರುಣಿಸುವುದು ಮತ್ತು ಬಾಳಿನ ಹೋರಾಟದಲ್ಲಿ ನೆಮ್ಮದಿಯನ್ನು ಕರುಣಿಸುವುದು. ಇವನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು:

೧. ಶಾಸ್ತ್ರಗಳಲ್ಲಿ ಹೇಳಿರುವ ಆಧ್ಯಾತ್ಮಿಕ ಅನುಭವಗಳೇ ಅಂತಿಮ ಪ್ರಮಾಣ, ಕೇವಲ ತರ್ಕವಲ್ಲ.

೨. ದೇವನೊಬ್ಬನೇ – ಅವನ ನಾಮರೂಪಗಳು ಅನೇಕ – 'ಏಕಂ ಸತ್ ವಿಪ್ರಾಃ ಬಹುಧಾ ವದಂತಿ.'

೩. ಎಲ್ಲ ಜೀವಿಗಳೂ ತಾವು ಬಿತ್ತಿದ ಬೀಜಗಳಿಗನುಸಾರ ಜೀವನದಲ್ಲಿ ಕಷ್ಟಗಳನ್ನು ಅನುಭವಿಸುತ್ತಾರೆ.

೪. ಕರ್ಮ, ಭಕ್ತಿ ಮತ್ತು ಜ್ಞಾನ ಇವುಗಳ ಸಾಧನೆಯ ಮೂಲಕ, ಮಾನವರು ಜೀವನದ ಕಷ್ಟಗಳಿಂದ ಪಾರಾಗಿ, ಪರಿಪೂರ್ಣತೆಯನ್ನು ಸಾಧಿಸಲು ಅನೇಕ ಮಾರ್ಗಗಳಿವೆ.

೫. ಪ್ರತಿಯೋರ್ವನೂ ದೈವೀಸಂಪತ್ತನ್ನು ಬೆಳಸಿಕೊಂಡು ಧರ್ಮಾತ್ಮನಾಗಿ ಜ್ಞಾನದ ಬೆಳಕನ್ನು ಕಂಡುಕೊಳ್ಳುವವನಾಗಬೇಕು. ಕೇವಲ ನೇಮನಿಷ್ಠೆಗಳನ್ನು ಪಾಲಿಸಿ, ಸಭ್ಯ ವ್ಯಕ್ತಿ ಎನಿಸಿಕೊಂಡರೆ ಸಾಲದು.

೬. ಪ್ರತಿಯೊಬ್ಬನೂ ತನ್ನ ಯೋಗ್ಯತೆ, ಅಭಿರುಚಿ, ಪ್ರವೃತ್ತಿಗನುಸಾರವಾಗಿ ತನ್ನ ಮಾರ್ಗವನ್ನು ಆಯ್ದುಕೊಳ್ಳಬೇಕು.

೭. ಲೌಕಿಕ ವಿಚಾರಗಳ ಬೆನ್ನಟ್ಟದೆ ಸ್ವತಂತ್ರರಾಗಿ ಆಧ್ಯಾತ್ಮಿಕ ರಾಜ್ಯವನ್ನು ಪ್ರವೇಶಿಸಿದರೆ ಪರಿಪೂರ್ಣತೆಯ ಪ್ರಾಪ್ತಿ.

ಸನಾತನ ಧರ್ಮದ ಪೂರ್ಣ ಉದ್ದೇಶವಿದು: ಮಾನವನಿಗೆ ಅವನ ಶಾರೀರಿಕ, ಬೌದ್ಧಿಕ, ನೈತಿಕ ಮತ್ತು ಭಾವನಾತ್ಮಕ ದೃಷ್ಟಿಕೋನಗಳಿಗೆ, ಆತ್ಮಸಾಕ್ಷಾತ್ಕಾರ ಅಥವಾ ಭಗವತ್ಸಾಕ್ಷಾತ್ಕಾರ ಅಥವಾ

ಪರಿಪೂರ್ಣತೆ ಅಥವಾ ಬಾಳಿನ ಗುರಿ ಅಥವಾ ಜ್ಞಾನೋದಯ ಅಥವಾ ಇವೆಲ್ಲವನ್ನೂ ಒಂದೇ ಶಬ್ದದಲ್ಲಿ ಹೇಳುವುದಾದರೆ 'ಪರಮ ಪುರುಷಾರ್ಥ' ಇದರ ಸಮರಸದ ಅನುಭವ ಗಳಿಸುವ ಅನ್ವೇಷಣೆಯ ವಿವಿಧ ಹಂತಗಳಲ್ಲಿ ಶಿಕ್ಷಣ ಕೊಡುವುದು.

ಈ ಅನ್ವೇಷಣೆಯ ಮೌಲ್ಯಗಳುಳ್ಳ ತಾತ್ವಿಕ ಮಾರ್ಗದರ್ಶನ, ಕೆಳಹಂತದಲ್ಲಿ ತನ್ನ ಒಳಿತಿಗಾಗಿ ಮತ್ತು ವಿಶ್ವಮಟ್ಟದಲ್ಲಿ ಎಲ್ಲರ ಒಳಿತಿಗಾಗಿ ಇರುವುದು. ಈ ಮೌಲ್ಯಗಳು ಬೆಳವಣಿಗೆಯ ವಿವಿಧ ಹಂತಗಳಲ್ಲಿ ಜನರಿಗೆ ಶಾಸನಗಳನ್ನು ಪಾಲಿಸುತ್ತಾ, ಧರ್ಮಶಾಸ್ತ್ರ ನಿಯಮಗಳನ್ನು ನಿರ್ವಹಿಸುತ್ತಾ, ಉನ್ನತ ಜೀವನಕ್ಕಾಗಿ ಆಶಿಸುತ್ತಾ, ಉತ್ತಮರೂ, ಉತ್ತಮತರರೂ, ಉತ್ತಮತಮರೂ ಆಗುತ್ತಾ, ಇತರರೂ ತಮ್ಮಂತೆಯೇ ಆಗಲು ಸಹಾಯ ಮಾಡಬೇಕು. ಒಬ್ಬ ವ್ಯಕ್ತಿ ಕೇವಲ ಸಭ್ಯವ್ಯಕ್ತಿಯಾದರೆ ಸಾಲದು. ಇವನಿಗಿಂತಲೂ ಎತ್ತರದಲ್ಲಿರುವವನು, ಬೆಳಕನ್ನು ಕಂಡುಕೊಂಡವನು, ಮತ್ತೂ ಎತ್ತರದಲ್ಲಿರುವವನು ಒಬ್ಬ ಆದರ್ಶವ್ಯಕ್ತಿ ಅಥವಾ ಮಹಾತ್ಮ ; ಪೂರ್ಣ ಸಾಮರ್ಥ್ಯದಿಂದ ಗುರುತಿಸಲ್ಪಡುವ, ಮಾನವನಾಗಬೇಕು. ನಾವು ತಿಳಿದಂತೆ ಮಾನವನು ದೇಹ ಮನಸ್ಸು ಮತ್ತು ಆತ್ಮವುಳ್ಳ ಒಂದು ಸಂಕೀರ್ಣ. ಶರೀರ ಪೋಷಣೆಗಾಗಿ ಆಹಾರ, ಮನೋವಿಕಾಸಕ್ಕಾಗಿ ತಿಳುವಳಿಕೆ ಮತ್ತು ಆತ್ಮನ ಪರಿಪೂರ್ಣತೆಗಾಗಿ ಆಧ್ಯಾತ್ಮಿಕ ಅನುಭವಗಳು ಅವಶ್ಯಕ. ಪರಿಪೂರ್ಣತೆ ಪಡೆಯಬೇಕೆಂಬ ದಾಹ ಅವನಲ್ಲಿ ಉತ್ಸಾಹ ತುಂಬಿ, ಇನ್ನೂ ಉತ್ತಮವಾದುದನ್ನು, ಇನ್ನಷ್ಟು ಉತ್ತಮವಾದುದನ್ನು ಪಡೆಯಲು ಪಡುವ ಸತತ ಪ್ರಯತ್ನ ಅನಾದಿ ಕಾಲದಿಂದಲೂ ನಡೆಯುತ್ತ ಬಂದಿದೆ. ಯಾವ ಮೌಲ್ಯಗಳು ಪರಿಪೂರ್ಣತೆ ಪಡೆಯಲು ದೇಹ, ಮನಸ್ಸು ಮತ್ತು ಆತ್ಮಗಳನ್ನು ಬಲಪಡಿಸುವುದೋ ಅವೇ ಶಾಶ್ವತ ಸನಾತನ ಮೌಲ್ಯಗಳು. ಜೀವನದ ಪಯಣದಲ್ಲಿ ಮಾನವನು ಅರಿವು ಮತ್ತು ಅನುಭವಗಳೊಡನೆ ಬೆಳೆಯುತ್ತಿದ್ದಂತೆ ಮೌಲ್ಯ, ಸತ್ಯ ಮತ್ತು ಭಗವಂತ ಇವುಗಳ ವಿಚಾರದಲ್ಲಿ ಅವನ ಮನೋಭಾವನೆಗಳು ಉದಾತ್ತವೂ, ಉನ್ನತವೂ, ಪರಿಶುದ್ಧವೂ ಮತ್ತು ಸೂಕ್ಷ್ಮವೂ ಆಗುತ್ತವೆ. ಕೆಳಸ್ತರದಿಂದ ಉನ್ನತ ಸ್ತರದವರೆಗೆ ಇರುವ ಅನೇಕ ವಿಚಾರಗಳು ವಿವಿಧ ಧಾರ್ಮಿಕ ಪಥಗಳ ಉದಯಕ್ಕೆ ಕಾರಣವಾಯಿತು. ಈ ಎಲ್ಲಾ ವೈವಿಧ್ಯಗಳ ನಡುವೆಯೂ ದೈವತ್ವವು ಬಂಗಾರದ ಸೂತ್ರದಂತೆ ಇವುಗಳೆಲ್ಲದರ ಮೂಲಕ ಹಾದುಹೋಗಿರುತ್ತದೆ.

ಮಾನವನ ವ್ಯಕ್ತಿತ್ವಕ್ಕೆ, ವೈಯುಕ್ತಿಕ ನೆಲೆಯಲ್ಲೂ, ಇಡೀ ವಿಶ್ವದ ನೆಲೆಯಲ್ಲೂ ಮೌಲ್ಯಗಳು ಮೂಲಭೂತ ಮಹತ್ವವುಳ್ಳದ್ದಾಗಿವೆ. ಅವು ಮನುಷ್ಯನಲ್ಲಿ ಸಹಜವಾಗಿರುವ ಶ್ರೇಷ್ಠತೆ, ಯುಕ್ತಾಯುಕ್ತ ಪರಿಜ್ಞಾನ, ನೈತಿಕ ಜವಾಬ್ದಾರಿಯ ಅರಿವು, ಸೃಜನಾತ್ಮಕ ಕಾರ್ಯಶಕ್ತಿಯ ಬೆಳವಣಿಗೆ, ಮೌಲ್ಯಯುಕ್ತ ಕೆಲಸಗಳನ್ನು ಮಾಡಬಲ್ಲೆ ಎಂಬ ಭರವಸೆ, ಆತ್ಮಗೌರವ ಹಾಗೂ ವ್ಯಕ್ತಿಗತ ಪ್ರಾಮಾಣಿಕತೆಗಳ ಪ್ರಜ್ಞೆ ಮೂಡುವಂತೆ ಮಾಡುವುವು.

ಬಾಹ್ಯ ಹಾಗೂ ಆಂತರಿಕ ಪ್ರಕೃತಿಯ ಪ್ರಲೋಭನೆಗಳನ್ನು ನಿಗ್ರಹಿಸಿ ಅಭಿವೃದ್ಧಿ ಮತ್ತು ಪ್ರಗತಿಯ ಪಥದಲ್ಲಿ ಸಾಗಲು ಸಾಮಾನ್ಯವಾಗಿ ರೂಢಿಯಲ್ಲಿರುವ 'ಪ್ರಮಾಣ' ಎಂದು ಕರೆಯಲ್ಪಡುವ ಮೌಲ್ಯಗಳು ಮಾನವಕುಲದಿಂದ ಸೃಜಿಸಲ್ಪಟ್ಟಿವೆ. ಇವು ಕೇವಲ ಬಾಹ್ಯವಾಗಿದ್ದರೆ ಅದು ಬಾಳನ್ನು ಕೇವಲ ಯಾಂತ್ರಿಕವನ್ನಾಗಿಸಿ, ಮಾನವನನ್ನು ಒಂದು ಯಂತ್ರ ಅಥವ ಗುಲಾಮನನ್ನಾಗಿ ಮಾಡುವುದು. ಅದು ಆಂತರಿಕವೂ ಆದಾಗ ಎಲ್ಲರ ಒಳಿತನ್ನು ಬಯಸುವ ಆಧ್ಯಾತ್ಮಿಕ ವ್ಯಕ್ತಿಯನ್ನಾಗಿ ಮಾಡುವುದು. ಪ್ರಖ್ಯಾತ ಸಂತ ಕನ್‌ಫ್ಯೂಷಿಯಸ್ ಜೀವನದ ಮೌಲ್ಯಗಳನ್ನು ವಿವರಿಸುವಾಗ ಹೀಗೆ ಹೇಳುತ್ತಾರೆ : ''ತುಕ್ಕು ಹಿಡಿದಿರುವ ಕಬ್ಬಿಣದ ತುಂಡೊಂದನ್ನು ನೀವು ತೆಗೆದುಕೊಂಡರೆ ಅದನ್ನು ಮಾರುಕಟ್ಟೆಯಲ್ಲಿ ಉಪಯೋಗಕ್ಕೆ ಬಾರದ ಅವಶೇಷಗಳೆಂದು ಮಾರಬಹುದು. ಆದರೆ ಅದನ್ನು ಶುದ್ಧಗೊಳಿಸಿ ಹರಿತಮಾಡಿದಾಗ ಉಪಯುಕ್ತ ಯಂತ್ರೋಪಕರಣವಾಗಿ ಕೆಲಸ ಮಾಡಲು ಅದನ್ನು ಉಪಯೋಗಿಸಬಹುದು. ಅದನ್ನು ಇನ್ನೂ ಹದಗೊಳಿಸಿದಾಗ ಅದರಿಂದ ಇನ್ನೂ ಉತ್ತಮವಾದ ಸಾಧನಸಲಕರಣೆಗಳನ್ನು ತಯಾರು ಮಾಡಿ ಅತ್ಯಂತ ಉತ್ತಮ ಕೆಲಸಗಳಿಗೆ ಉಪಯೋಗಿಸಬಹುದು. ಇದರಂತೆಯೇ ಕಚ್ಚಾ ಎಣ್ಣೆಯನ್ನು ಸಂಸ್ಕರಿಸುವುದು – ಇದನ್ನು ಹೆಚ್ಚು ಸಂಸ್ಕರಿಸಿದಾಗ ವೈವಿಧ್ಯಮಯವಾದ ಉತ್ತಮ ಹಾಗೂ ಶ್ರೇಷ್ಠ ಉತ್ಪನ್ನಗಳನ್ನು ತಯಾರಿಸಬಹುದು.''

ವೇದಗಳು ಉಪಯೋಗಿಸುವ ಅರ್ಥಪೂರ್ಣ ಶಬ್ದ 'ಧರ್ಮ' ಎಂಬುದು ಪ್ರಧಾನ ನಿರ್ಬಂಧವಾಗಿ, ನಾವು ಸ್ವಚ್ಛಂದರಾಗಿ ವರ್ತಿಸದಂತೆ ಅಂಕೆಯಲ್ಲಿಡುವುದು. ಇದನ್ನು ಮೌಲ್ಯಗಳ ವಿಜ್ಞಾನ ಎಂದು ವರ್ಣಿಸಲಾಗಿದೆ. ಇದು ಅನೇಕ ಅರ್ಥಗಳನ್ನು ಧ್ವನಿಸುತ್ತದೆ. ಅವುಗಳು ಹೀಗಿವೆ: ಧರ್ಮ, ಸಂಪ್ರದಾಯ, ನಿಯಮ, ಪದ್ಧತಿ, ಧಾರ್ಮಿಕವಿಧಿ, ಕಟ್ಟಳೆ, ನೈತಿಕಮೌಲ್ಯ, ಉತ್ತಮ ಗುಣ, ಉತ್ತಮ ಕರ್ಮ, ನಡತೆ, ಚಾರಿತ್ರ್ಯ, ಕರ್ತವ್ಯ, ನ್ಯಾಯ, ನೀತಿ (ತತ್ತ್ವ) ನಿಯಮಗಳು, ನೀತಿ ಧರ್ಮ, ಪ್ರಾಮಾಣಿಕತೆ, ಪ್ರಕೃತಿ, ಮನೋಧರ್ಮ, ಗುಣಲಕ್ಷಣ, ವೈಶಿಷ್ಟ್ಯ, ಶಿಷ್ಟಾಚಾರ, ವಿಶಿಷ್ಟತೆ, ನಿಷ್ಪಕ್ಷಪಾತ, ಸತ್ಸಂಗ, ಮನುಷ್ಯ– ಪ್ರಯತ್ನ ಇನ್ನು ಮುಂತಾದವುಗಳು.

ಮೌಲ್ಯಗಳು ಹೊರ ಪ್ರಕೃತಿಯಿಂದ ಬರುವಂತಹುದಲ್ಲ, ಬಾಳಿನ ಕೆಳಮಟ್ಟದಲ್ಲಿ ಅದು ಚೆನ್ನಾಗಿ ಕೆಲಸ ಮಾಡಬಹುದು. ಆದರೆ ಮಾನವೀಯ ಹಂತದಲ್ಲಿ ವಿಕಸನ ಮತ್ತು ಪ್ರಗತಿ, ಸಾಮಾಜಿಕ, ಸಾಂಸ್ಕೃತಿಕ, ಮನೋವೈಜ್ಞಾನಿಕ ಮತ್ತು ವಿಶ್ವಮಟ್ಟಕ್ಕೆ ಏರುತ್ತದೆ. ಅತ್ಯಧಿಕ ಅಧಿಕಾರ ಮತ್ತು ಬುದ್ಧಿ ಶಕ್ತಿ ಮಾನವನನ್ನು ಪಿಶಾಚಿಯನ್ನಾಗಿ ಮಾಡಿಬಿಡುತ್ತದೆ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಆದ್ದರಿಂದ ಮನಸ್ಸನ್ನು ನಿಗ್ರಹಗೊಳಿಸಿ ಈ ಅಪಾಯದಿಂದ ಪಾರಾಗಲು ಮೌಲ್ಯಗಳು ಅತ್ಯಂತ ಆವಶ್ಯಕ. ಮೌಲ್ಯಗಳ ಮತ್ತೊಂದರ್ಥ ನಮ್ಮ ಸುತ್ತಲಿರುವ ಪ್ರಪಂಚದ ಬಗ್ಗೆ ಕಾಳಜಿ ವಹಿಸುವುದು. ನನ್ನ ಶರೀರದಂತೆ ಇಲ್ಲದ ಮತ್ತೊಂದು ವಸ್ತು ನನ್ನೊಳಗಿದೆ ಎಂಬ ಉದಾತ್ತಭಾವನೆಗಳನ್ನು ನಾವು ರೂಢಿಸಿಕೊಳ್ಳಬೇಕು. 'ನಾನು ಶರೀರ' ಎಂಬ ವಿಷಯ ಹೋಗಿ 'ಶರೀರದಲ್ಲಿ ನೀನೆ' ಎಂಬುದಕ್ಕೆ ಸ್ಥಳಕೊಡಬೇಕು – 'ನಿಜವಾದ ನಾನು' –

ದೇಹ, ಮನಸ್ಸು ಮತ್ತು ಅಹಂಕಾರದಿಂದ ಭಿನ್ನವಾದುದು – ಚೈತನ್ಯ ಅಥವಾ ಆತ್ಮ. ಈ ವಿಷಯದ ಅಸ್ತಿತ್ವವನ್ನು ವೇದಗಳು ಬಹಳ ಹಿಂದೆಯೇ ಘೋಷಿಸಿವೆ. ಹೊರ ಪ್ರಪಂಚದಲ್ಲಿ ಪ್ರಕೃತಿಗೆ ಮೀರಿದ ಈ ಮೌಲ್ಯಗಳು ಆಧುನಿಕ ಮಾನವನ ಅರಿವಿಗೆ ಬಾರದು. ಧರ್ಮದ ಸಾರ ಮಾತ್ರ ಇದನ್ನು ಬೋಧಿಸುತ್ತದೆ. ವರ್ತಮಾನ ಕಾಲಕ್ಕನುಗುಣವಾಗಿ, ಅದು ಸಮಂಜಸವಾಗುವಂತೆ ಅರ್ಥವಿವರಣೆ ನೀಡಿ ವಿಖ್ಯಾತಗೊಳಿಸಿ ಅದನ್ನು 'ಅನುಷ್ಠಾನ ವೇದಾಂತ' ಎಂದು ಕರೆದು ಸ್ವಾಮಿ ವಿವೇಕಾನಂದರು ಈ ಮೌಲ್ಯಗಳನ್ನು ಪ್ರಚುರಪಡಿಸಿದರು. ಇದರ ಆಳ ಮತ್ತು ಅಗಲ ಗಮನಾರ್ಹವಾದುದು.

ಇವುಗಳ ಮೂಲ ಎಲ್ಲಿದೆ? ಈ ಎಲ್ಲ ಮೌಲ್ಯಗಳ ಕೇಂದ್ರ ನಮ್ಮೆಲ್ಲರ ಒಳಗಿರುವ ಆತ್ಮ, ನಿಜಮಾನವ, ದೈವೀಕ ಅಗ್ನಿಕಣ, ಈ ದಿವ್ಯಶಕ್ತಿಯನ್ನು ಪ್ರತಿ ಕಾರ್ಯದಲ್ಲೂ, ಪ್ರತಿಕ್ಷಣದಲ್ಲೂ ಪ್ರಕಟಗೊಳಿಸಿ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಸ್ವಾಮೀಜಿ ಮುಂದುವರೆಸುತ್ತಾ, ಮಾನವನ ಸಾರಭೂತವಾದ ಸದ್ಗುಣವನ್ನೂ, ಅವನ ಬ್ರಹ್ಮಸ್ವರೂಪವನ್ನೂ ಪ್ರಕಟಗೊಳಿಸಿ ಎನ್ನುತ್ತಾರೆ. ಮಾನವನು ತನ್ನ ಅಸ್ತಿತ್ವದ ಎಲ್ಲ ಅವಯವಗಳ ಅಭಿವೃದ್ಧಿಗೆ ಸಹಾಯವಾಗುವ ಮೂಲತತ್ತ್ವಗಳನ್ನು ಸಹಜವಾಗಿಯೇ ಪಡೆದಿದ್ದಾನೆ. ಇದರ ಮೊದಲನೆಯ ಭಾಗದಲ್ಲಿ ಬಾಳಿನ ಭದ್ರ ಬುನಾದಿಯಾಗಿ ನಿಲ್ಲುವ ಅವನ ರೂಢಿಗಳು, ಅಭಿರುಚಿಗಳು, ಪ್ರಚೋದನೆಗಳು ಮತ್ತು ಜೀವನಶೈಲಿ ಇವುಗಳಿಗೆ ಪ್ರಭಾವ ಬೀರುವ ಕಾರ್ಯಗಳು ಇರುತ್ತವೆ. ಎರಡನೆಯ ಭಾಗದಲ್ಲಿ ನೈತಿಕ ಮೌಲ್ಯಗಳ ಮತ್ತು ನೈತಿಕ ಶಿಕ್ಷಣಗಳ ಪವಿತ್ರ ಹಾದಿಯಲ್ಲಿ ನಮ್ಮ ಇಚ್ಛೆಗಳಿಗೆ ಸೂಕ್ತ ತರಬೇತಿ ನೀಡುವ ವಿಚಾರ. ನಮ್ಮ ಭಾವನೆಗಳೇ ನಮ್ಮ ಇಚ್ಛೆಯನ್ನು ಪ್ರಮುಖವಾಗಿ ನಿಶ್ಚಯಿಸುವುದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಯಾವುದರಿಂದ ಮಾನವನ ಭಾವನೆಗಳು ಮತ್ತು ಆಕಾಂಕ್ಷೆಗಳು ಅವನು ಆರೋಹಣಗೈಯುವ ಏಣಿಯ ಮೂಲಕ ಬಹು ಎತ್ತರದ ಸ್ಥಾನಕ್ಕೆ ಕರೆದೊಯ್ಯುವುದೋ ಅಂತಹ ಸಮಯದಲ್ಲಿ ಪ್ರಾರ್ಥನೆ ಮತ್ತು ಧ್ಯಾನದ ವಿಶೇಷ ಆವಶ್ಯಕತೆ ಬರುತ್ತದೆ. ಇವೆಲ್ಲಕ್ಕೂ ಮಿಗಿಲಾಗಿ ಮಾನವ ಯಾವುದನ್ನು ಭಾವಿಸುತ್ತಾನೋ ಮತ್ತು ಬಯಸುತ್ತಾನೋ, ಅದರ ಭಾಗವಾಗಿ ಯಾವುದನ್ನು ಅವನು ಗ್ರಹಿಸುತ್ತಾನೋ ಮತ್ತು ವಿವೇಚಿಸುತ್ತಾನೋ, ಬಾಹ್ಯದಲ್ಲಿ ಗೋಚರಿಸುವ ಪ್ರಪಂಚ ಮಾತ್ರವಲ್ಲ ಅವನ ಅಂತರಂಗದ ಅಗೋಚರ ಪ್ರಪಂಚ ಇದರ ಉದ್ದೇಶವೂ ಸೇರಿ ತತ್ತ್ವಜ್ಞಾನ ಎಂದು ಕರೆಯಲ್ಪಡುತ್ತದೆ. ಸಂಪ್ರದಾಯ, ನೀತಿಬದ್ಧ ನಡತೆ, ಭಾವನಾತ್ಮಕ ವಿಚಾರ, ತರ್ಕಸಮ್ಮತ ವಿಚಾರ ಎಂಬ ಈ ನಾಲ್ಕು ಮೂಲವಸ್ತುಗಳು ಸೂಕ್ತ ಪ್ರಾಮುಖ್ಯತೆಯನ್ನು ಪಡೆದರೆ ಮಾತ್ರ ಅದು ಒಂದು ಸುಂದರ ಸಮತೋಲವುಳ್ಳ ಜೀವನಶೈಲಿ ಎನಿಸುತ್ತದೆ. ಹೀಗೆ ಮಾನವನ ಪೂರ್ಣ ಅಸ್ತಿತ್ವ ಹಾಗೂ ಅವನ ಎಲ್ಲ ಚಟುವಟಿಕೆಗಳು ಧರ್ಮದಲ್ಲೇ ಸಮಾವೇಶಗೊಂಡಿದೆ. ಇಲ್ಲಿ ಶ್ರೀರಾಮಕೃಷ್ಣರು ಕೊಡುವ ಒಂದು ಉದಾಹರಣೆಯು ಸ್ಮರಿಸಲು ಯೋಗ್ಯವಾಗಿದೆ : ಬಿಲ್ವವೃಕ್ಷದ ಒಂದು ಹಣ್ಣಿನ ಸರಿಯಾದ ತೂಕವನ್ನು ನಿರ್ಧರಿಸುವಾಗ, ಅದರ ಸಾರ ವಸ್ತು ಮೃದುವಾದ ತಿರುಳಾದರೂ, ಅದರ ತಿರುಳು, ಬೀಜ, ಸಿಪ್ಪೆ, ತೊಗಟೆ ಎಲ್ಲವನ್ನು ಒಟ್ಟುಗಣನೆಗೆ ತೆಗೆದುಕೊಂಡು ಅದರ ಯೋಗ್ಯ ಬೆಲೆಯನ್ನು ನಿರ್ಧರಿಸಬೇಕು.

ಹೇಗೆ? ಯಾರಿಗಾದರೂ ನೀವು ಒಂದು ರಸ್ತೆಯನ್ನೋ, ಮನೆಯನ್ನೋ, ಮಾರ್ಗವನ್ನೋ ತೋರಿಸಬೇಕಾದರೆ, ನೀವು ನಿಮ್ಮ ಮನೆಯಿಂದ ಸ್ವಲ್ಪ ಹೊರಗೆಬಂದು ಸಹಾಯ ಮಾಡಬೇಕಾಗುತ್ತದೆ. ಇದು ನಿಮ್ಮ ಚಿಕ್ಕ ಶರೀರದಿಂದ ಮಾಡುವ 'ತ್ಯಾಗ'. ನೀವು ನಿಮ್ಮ ಶರೀರವೆಂಬ ಸೆರೆಮನೆಯಿಂದ ಹೊರಬಂದು ನಿಮ್ಮ ಸುತ್ತಲಿರುವ ಇತರರ ಬಗ್ಗೆ ಕಾಳಜಿ ವಹಿಸಿ, ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಎಷ್ಟು ಹೆಚ್ಚು ಸಾಧ್ಯವೋ ಅಷ್ಟು ಅವರಿಗೆ ಸಹಾಯ ಮಾಡಿದಾಗ ಮೌಲ್ಯಗಳ ಉಗಮವಾಗುವುದು. ಈ ರೀತಿ ಮೌಲ್ಯವೆಂಬುದು ಒಬ್ಬ ವ್ಯಕ್ತಿಯ ಬಾಳಿನಲ್ಲೂ, ಸಮಾಜದಲ್ಲೂ ಸೃಜಿಸಲ್ಪಟ್ಟು ಸಂರಕ್ಷಿಸಲ್ಪಡುವುದು. ಇದು ಪ್ರವಚನ, ಶೋಧನೆ, ಉಪದೇಶಗಳಿಂದ ಸ್ವಲ್ಪಮಟ್ಟಿಗೆ ಸಂರಕ್ಷಿಸಲ್ಪಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ಯಾವುದು ಎಲ್ಲ ಜೀವಿಗಳಿಗೂ ತಕ್ಷಣಕ್ಕೆ ಮತ್ತು ದೀರ್ಘ ಕಾಲದವರೆಗೆ ಪ್ರಯೋಜನಕರವೋ ಅಂತಹ ಇಚ್ಛೆಯನ್ನು ಎಲ್ಲರ ಸಂಪೂರ್ಣ ಯೋಗ ಕ್ಷೇಮಕ್ಕಾಗಿ ಬಯಸಿದರೆ ಅದು ಪ್ರತಿಯಾಗಿ ಅಗತ್ಯಗಳೆಲ್ಲವನ್ನೂ ಪೂರೈಸುತ್ತದೆ. ಇದನ್ನು ಪುರುಷಾರ್ಥಗಳೆಂದು ಕರೆಯುತ್ತಾರೆ.

ಮೌಲ್ಯಗಳಲ್ಲಿ ಎರಡು ಬಗೆ:

೧. **ನೈಜ ಮೌಲ್ಯ**– ಸ್ವಾಭಾವಿಕತೆ, ಪೂರ್ಣತೆ, ಆವಶ್ಯಕತೆ ಇವುಗಳಿಲ್ಲದಿದ್ದರೆ ನಾವು ನಿರ್ಜೀವ ವಸ್ತುವಾಗುತ್ತೇವೆ.

೨. **ಪ್ರಾಸಂಗಿಕ ಮೌಲ್ಯ**– ನಮ್ಮ ಜೀವನದ ಭೌತಿಕ ಸೌಖ್ಯಗಳಿಗೆ, ವಿಚಾರ ಮತ್ತು ಜ್ಞಾನಗಳಿಗೆ, ಮೂಲತತ್ತ್ವ ಮತ್ತು ಆದರ್ಶಗಳ ಅರಿವನ್ನುಂಟುಮಾಡುವ ವಿಚಾರಗಳಿಗೆ ತಕ್ಷಣದ ಅಗತ್ಯಗಳನ್ನು ಪೂರೈಸುವ ಸಾಧನಗಳು.

ಆದರೆ ದುರ್ದೈವದಿಂದ ನಮ್ಮ ಜೀವನದಲ್ಲಿ 'ಮಾರ್ಗ'ವೇ ಮೇಲುಗೈಯಾಗಿ, ಅದೇ 'ಗುರಿ' ಎಂಬಂತಾಗಿ, ಅದೇ ಸರ್ವವೂ ಆಗಿಬಿಟ್ಟು, ವ್ಯಕ್ತಿತ್ವದಲ್ಲಿ ಬದಲಾವಣೆಯಾಗಬೇಕೆಂಬ ಪ್ರಮುಖ ವಿಚಾರವನ್ನೇ ಅದು ಮರೆಸಿಬಿಡುತ್ತದೆ. ನಮ್ಮನ್ನು ನಾವು ಆತ್ಮ ತುಲನೆ, ಆತ್ಮಾವಲೋಕನ ಮಾಡುವುದನ್ನು ಕಲಿತು, ವಸ್ತುನಿಷ್ಠೆ ಹಾಗೂ ವ್ಯಕ್ತಿನಿಷ್ಠೆಯಿಂದ ಮೌಲ್ಯವನ್ನು ಬೆಳೆಸಿ, 'ನಾವೇನಾಗಿದ್ದೇವೆ' ಎಂಬುದನ್ನು ಅಳೆಯದೆ 'ನಮ್ಮ ಬಳಿ ಎಷ್ಟು ಸ್ವತ್ತು ಇದೆ' ಎಂದು ಅಳೆಯುವ ವಿರೋಧಾಭಾಸವನ್ನು ಅದು ನಿವಾರಿಸಬೇಕು.

ಪ್ರಕೃತಿ ಇರುವುದು ಪುರುಷನಿಗಾಗಿ, ಪುರುಷ ಅಥವಾ ಆತ್ಮ ಪ್ರಕೃತಿಗಾಗಿ ಅಲ್ಲ ಎಂಬ ಸಾಂಖ್ಯದರ್ಶನದ ನೋಟವು ಈ ಸತ್ಯವನ್ನು ಅರಿಯಲು ಬೇಕಾದ ಆದರ್ಶದ ಆವಶ್ಯಕತೆಯನ್ನು ಸಮರ್ಥಿಸುತ್ತಿದೆ. ಹೇಗೆ ಚಿತ್ರಕಾರನೊಬ್ಬ ಚಿತ್ರವನ್ನು ಬರೆಯುವ ಮುನ್ನ ತನ್ನ ಮನಸ್ಸಿನಲ್ಲಿ ಅದರ ಒಂದು ಕಲ್ಪನೆಯನ್ನು ಮಾಡಿ

ಕೊಳ್ಳುವನೋ ಅದರಂತೆ ಮಾನವನಿಗೂ ತನ್ನ ನ್ಯೂನತೆ, ದುರ್ಬಲತೆ, ತನ್ನೆದುರಿನ ಆದರ್ಶಕ್ಕೆ ವಿರುದ್ಧವಾದ ಆಕರ್ಷಣೆ ಇವುಗಳನ್ನು ಕಂಡುಕೊಳ್ಳಲು 'ಲೋಹಶೋಧಕಯಂತ್ರ'ದಂತೆ ಒಂದು ದೊಡ್ಡ ಆದರ್ಶದ ಆವಶ್ಯಕತೆ ಇದೆ. ಆದರ್ಶಗಳು ಬಾಳಿಗೆ ಮೌಲ್ಯಗಳನ್ನು ಕಲ್ಪಿಸುತ್ತವೆ, ದೌರ್ಜನ್ಯ ಧ್ವಂಸಗಳನ್ನು ನಿವಾರಿಸಿ ಬಾಳಿಗೊಂದು ಅರ್ಥವನ್ನು ಕಲ್ಪಿಸುತ್ತವೆ. ಇದನ್ನು ನಾವು ಚೆನ್ನಾಗಿ ಅರ್ಥಮಾಡಿಕೊಂಡು, ನಮ್ಮ ಬಾಳನ್ನು ಮತ್ತೂ ಉತ್ತಮಗೊಳಿಸುವ ಉದ್ದೇಶವಿಟ್ಟುಕೊಂಡು ಉಪಯೋಗಿಸಿದರೆ ಬಾಳು ಧನ್ಯವಾಗುತ್ತದೆ. ಸನಾತನ ಧರ್ಮದ ವೈದಿಕ ಘೋಷಣೆಯನುಸಾರ ಬಾಳಿನ ನಿಜವಾದ ಉದ್ದೇಶವೇನು ಎಂಬುದರ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: ''ಪ್ರತಿಯೊಂದು ಆತ್ಮನಲ್ಲಿಯೂ ದಿವ್ಯತೆ ಹುದುಗಿರುವುದು. ಈ ಸುಪ್ತವಾದ ದಿವ್ಯತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಪಡಿಸುವುದೇ ಜೀವನದ ಗುರಿ. ಇದನ್ನು ಕರ್ಮಯೋಗದಿಂದಾಗಲಿ, ಭಕ್ತಿಯೋಗದಿಂದಾಗಲಿ, ರಾಜಯೋಗದಿಂದಾಗಲಿ, ಜ್ಞಾನಯೋಗದಿಂದಾಗಲಿ, ಯಾವುದಾದರೂ ಒಂದು ಮಾರ್ಗದಿಂದ ಅಥವಾ ಎಲ್ಲ ಮಾರ್ಗಗಳ ಸಂಯೋಗದಿಂದ ಆಗಲಿ ಸಾಧಿಸಿ ಮುಕ್ತರಾಗಿ. ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾಚಾರ, ಪವಿತ್ರ ಗ್ರಂಥ, ದೇವಸ್ಥಾನ, ವಿಗ್ರಹ — ಇವೆಲ್ಲಾ ಗೌಣ.''

ಎಲ್ಲ ಮೌಲ್ಯಗಳೂ ನಿಜವಾದ ಅಧ್ಯಾತ್ಮ ಎನ್ನುತ್ತದೆ ವೇದಾಂತ. ಲೋಕದಲ್ಲಿ ಅವುಗಳ ಪ್ರಭಾವ ದೈಹಿಕವಾಗಿ ಆಹಾರ, ವಸ್ತ್ರ, ನೆಲೆ, ರಕ್ಷಣೆಯ ಅಗತ್ಯಗಳಲ್ಲೂ; ಶೈಕ್ಷಣಿಕವಾಗಿ ನಾವು ಆರಿಸುವ, ಪ್ರಶ್ನಿಸುವ ಎಲ್ಲ ವಿಚಾರಗಳ ಅರ್ಥಗಳಲ್ಲಿ, ಹಾಗೂ ಕೇವಲ 'ಮಾಹಿತಿಗಳ ಮಣಭಾರ'ವಲ್ಲದೆ ನಮ್ಮ ಸಮಸ್ಯೆಗಳಿಗೆ ಕಂಡುಕೊಳ್ಳುವ ಪರಿಹಾರಗಳಲ್ಲಿಯೂ; ಸೌಂದರ್ಯದ ದೃಷ್ಟಿಯಿಂದ, ನಾವು ಬಳಸುವ ಮತ್ತು ತೊಡಗಿಕೊಳ್ಳುವ ಎಲ್ಲದರ ಮೌಲ್ಯಗಳಲ್ಲೂ; ಅಹಂಕಾರದ ದೃಷ್ಟಿಯಿಂದ ಪ್ರೀತಿ, ಹೊಗಳಿಕೆ, ಸ್ಥಾನ, ಮಾನ, ಅನುಕಂಪೆ, ಮನ್ನಣೆ ಮುಂತಾದುವುಗಳಲ್ಲೂ ಈ ಮೌಲ್ಯಗಳು ವ್ಯಕ್ತವಾಗುತ್ತವೆ. ಈ ಪಟ್ಟಿಗೆ ನಾವು ಇನ್ನೂ ಅನೇಕ ವಿಚಾರಗಳನ್ನು ಸೇರಿಸುತ್ತಾ ಹೋಗಬಹುದು.

ನೈತಿಕವಾಗಿ ಪರಿವರ್ತಿತನಾದವನು ಮಾತ್ರ ಶಿಕ್ಷಣದ ಶಕ್ತಿಯನ್ನು ಸರಿಯಾಗಿ ಉಪಯೋಗಿಸಬಲ್ಲ. (ಸ್ವಾಮಿ ವಿವೇಕಾನಂದರು ಶಿಕ್ಷಣ ಎಲ್ಲರೀತಿಯ ಅನಾರೋಗ್ಯಕ್ಕೂ ಸಿದ್ಧೌಷಧ ಎಂದು ಘೋಷಿಸಿದ್ದಾರೆ) becoming and being ಮೂಲಕವೇ ನಮ್ಮ ಸಹಜ ಸ್ಥಿತಿಯನ್ನು ಮರಳಿ ಪಡೆಯಬೇಕು ಮತ್ತು ನಮ್ಮ ಸ್ವಂತ ಶ್ರದ್ಧೆಯ ಮೂಲಕವೇ ಪರಿವರ್ತನೆಯನ್ನು ತರಬೇಕು, ಕೇವಲ ಮಾಡುವುದರಿಂದ ಅಥವಾ ಗಳಿಸುವುದರಿಂದಲ್ಲ. 'ಮಾಡು' ಎಂಬುದು 'ಇರು' ಎಂತಾಗಬೇಕು.

ಮಾನವನಿಗೆ ಅಗತ್ಯವಾಗಿ ಬೇಕಾಗಿರುವುದು ಸನಾತನಧರ್ಮ ರೀತ್ಯಾ, ಅಭ್ಯುದಯ ಮತ್ತು ನಿಃಶ್ರೇಯಸ ಇವೆರಡೂ ಇರುವ ಮೌಲ್ಯಗಳ ಶಿಕ್ಷಣಗ್ರಹಣವೇ ಹೊರತು, ಆಜ್ಞೆ, ಕಾನೂನು, ನಿಯಮ, ಶಾಸನಸಭೆಯ ಮಸೂದೆ, ವಿಶೇಷ ಕಾಯಿದೆಗಳು ಅಥವಾ ರಾಜ್ಯಶಾಸನ ಅಲ್ಲ. ಇವುಗಳು ಮನುಷ್ಯನನ್ನು ತಯಾರು ಮಾಡುವುದಿಲ್ಲ. ಅವುಗಳೇನಿದ್ದರೂ ಮಾನವನಿಗೆ ಬಾಳಿನ ಗುರಿಯನ್ನು ಸಾಧಿಸಲು ಸಹಾಯ ಮಾಡುವ ಮಜಲುಗಳು ಮಾತ್ರ.

ಮ್ಯಾಕ್ಸ್ ಮುಲ್ಲರ್ ಹೇಳುತ್ತಾರೆ: ಆತ್ಮ, ಅಂತರಾತ್ಮ, ದೇಹದೊಳಗಿರುವ ಪ್ರತ್ಯಕ್ಷ ಪುರುಷನನ್ನು ಅವಲೋಕಿಸಲು ಅಗತ್ಯವಾದ ದೂರದರ್ಶನಯಂತ್ರ, ಉಪನಿಷತ್ತಿನಲ್ಲಿ ಹುದುಗಿರುವ ವೇದಾಂತ ಚಿಂತನೆಗಳು ಅಥವಾ ಅವುಗಳ ಅಮರ ತತ್ತ್ವಗಳು.

ಸಂತರೊಬ್ಬರ ನುಡಿಯಂತೆ ಮಾನವನ ಜೀವನದ ಆರೋಹಣದ ಬಗ್ಗೆ ಮೇಲೆ ವಿವರಿಸಿದ ಎಲ್ಲ ಅಂಶಗಳನ್ನೂ ಸಾರಾಂಶ ರೂಪದಲ್ಲಿ ಹೀಗೆ ಹೇಳಬಹುದು:

೧೫ನೇ ವಯಸ್ಸಿನಲ್ಲಿ — ನಾನು ಬಹಳ ಗಂಭೀರವಾಗಿ ವ್ಯಾಸಂಗ ಮಾಡಲು ಪ್ರಾರಂಭಿಸಿದೆ.

೩೦ನೇ ವಯಸ್ಸಿನಲ್ಲಿ — ನನ್ನ ಗುಣಲಕ್ಷಣಗಳು ರೂಪಿಸಲ್ಪಟ್ಟವು.

೪೦ನೇ ವಯಸ್ಸಿನಲ್ಲಿ — ನನಗೆ ಜೀವನದಲ್ಲಿ ಯಾವುದೇ ಕಳವಳವಿರಲಿಲ್ಲ.

೫೦ನೇ ವಯಸ್ಸಿನಲ್ಲಿ— ದೈವೇಚ್ಛೆಯನ್ನು ಅರಿತೆ.

೬೦ನೇ ವಯಸ್ಸಿನಲ್ಲಿ— ನಾನು ಕೇಳಿದುದಾಗಲೀ, ಸನ್ನಿವೇಶಗಳಾಗಲೀ ನನ್ನನ್ನು ಕ್ಷೋಭೆಗೊಳಿಸದಂತಹ ಮನಸ್ಥೈರ್ಯವನ್ನು ಪಡೆದೆ.

೭೦ನೇ ವಯಸ್ಸಿನಲ್ಲಿ— ನನ್ನ ಚಿಂತನೆಗಳು ತಪ್ಪುಹೆಜ್ಜೆಯಿಡದೆ ಸಮಚಿತ್ತದಿಂದ ಸ್ವತಂತ್ರವಾಗಿ ಸಂಚರಿಸಲು ಬಿಡುತ್ತೇನೆ.

ಸನಾತನಧರ್ಮಕ್ಕೆ ಸಂಸ್ಥಾಪಕರಾರೂ ಇಲ್ಲ. ಅವು ವ್ಯಕ್ತಿ ಸಂಬಂಧರಹಿತವಾದವು. ಸತ್ಯವೇ ಇದಕ್ಕೆ ಪ್ರಮಾಣ. ಪ್ರತಿ ಮಾನವನ ಆಧ್ಯಾತ್ಮಿಕ ಅನುಭವಗಳೇ ಇದಕ್ಕೆ ಸಾಕ್ಷಿ, ಕೇವಲ ಋಷಿಗಳದು ಮಾತ್ರವಲ್ಲ. ಇದಕ್ಕನುಗುಣವಾಗಿ ಇಡೀ ಜೀವನವು ಯೋಜಿಸಲ್ಪಟ್ಟಿರುತ್ತದೆ ಹಾಗೂ ರಚಿಸಲ್ಪಟ್ಟಿರುತ್ತದೆ. ಈ ತತ್ತ್ವಗಳ ಮೇರೆಗೆ ಮಾನವನು ಹಂತಹಂತವಾಗಿ ಅಭಿವೃದ್ಧಿ ಹಾಗೂ ಪರಿಪೂರ್ಣತೆಯೆಡೆಗೆ ಪಯಣಗೈಯುತ್ತಾನೆ. ಈ ಪಯಣ ಕೆಳಹಂತದ ಸತ್ಯದಿಂದ ಮೇಲ್ಮಟ್ಟದ, ಅದಕ್ಕೂ ಮೇಲ್ಮಟ್ಟದ ಸತ್ಯದೆಡೆಗೆ ಮಾನವನ ಆರೋಹಣ. ಅದಕ್ಕೆ ಬೇಕಾದ ಶಿಕ್ಷಣ: **ಸತ್ಕರ್ಮ** – ಅಂದರೆ, ಉದಾತ್ತ ಕರ್ಮಗಳನ್ನಾಚರಿಸುವುದು (ಹೆಚ್ಚು ಮಂದಿಗೆ ಅನುಕೂಲವಾಗುವಂತಹ ಕಾರ್ಯಗಳನ್ನೆಸಗುವುದು), **ಸದ್ಗುಣ** – ದೈವೀ ಸಂಪತ್ತಿಯಿಂದಿದ್ದು, ಉದಾತ್ತ ಮೌಲ್ಯಗಳನ್ನು ಬೆಳೆಸಿಕೊಳ್ಳುವುದು ಮತ್ತು **ಸದ್ಭಾವನೆ** – ಉದಾತ್ತ ದೃಷ್ಟಿಕೋನ ಮತ್ತು ಮನೋವೃತ್ತಿಯನ್ನು ವೃದ್ಧಿಪಡಿಸಿಕೊಳ್ಳುವುದು.

(ಮೈಸೂರು ಶ್ರೀರಾಮಕೃಷ್ಣಾಶ್ರಮದಲ್ಲಿ ೨೨.೦೪.೨೦೧೨ ರಂದು ನಡೆದ ಭಾರತೀಯ ಆಧ್ಯಾತ್ಮಿಕ ಸಮ್ಮೇಳನದಲ್ಲಿ ನೀಡಿದ ಪ್ರವಚನದ ಕನ್ನಡಾನುವಾದ)